**ಸಿಸಿ ಃ 735/2021**

**ಚಾಸಾ –1**

**ಪ್ರಾಸಾ –1**

**ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ**

**ಸಿಸಿ ಃ 735/2021**

ಸಾಕ್ಷಿದಾರರ ಹೆಸರುಃ ಯಶೋಧ
ತಂದೆ/ಗಂಡ ಹೆಸರುಃ ಕೃಷ್ಣಪ್ಪ
ವಯಸ್ಸುಃ 35
ವೃತ್ತಿಃ ಕೂಲಿ
ವಾಸಸ್ಥಳಃ ಬೆಂಬಲೂರು ಗ್ರಾಮ ಸೋಮವಾರಪೇಟೆ.
ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 01-04-2024

ಮುಖ್ಯ ವಿಚಾರಣೆಃ ಎಪಿಪಿಯವರಿಂದ

ನನಗೆ ಚಾಸಾ 2, 3 ನನ್ನ ತಂದೆ-ತಾಯಿ. ಮತ್ತು ಆರೋಪಿ ಪರಿಚಯ ನನಗೆ ಇದೆ. ನಾನು ಪೊಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ದಿಃ 25-05-2021 ರಂದು ನನ್ನ ಮಗ, ನಾನು, ತಂದೆ-ತಾಯಿ ಸೇರಿ ನಾಗವಾರಕ್ಕೆ ಕುಶಾಲನಗರದಿಂದ ಹೋಗುತ್ತಿದ್ದೇವು. ನಾವು ಹೋಗುತ್ತಿದ್ದ ಪ್ಯಾಸೆಂಜರ್ ಆಟೋಗೆ ಗಣಗೂರಿನ ಬಳಿ ಎದುರುಗಡೆಯಿಂದ ಆರೋಪಿಯ ಗೂಡ್ಸ್ ಆಟೋ ವೇಗವಾಗಿ ಬನಂದು ನಮ್ಮ ಆಟೋಗೆ ಗುದ್ದಿರುತ್ತದೆ. ನನ್ನ ಮಗನಿಗೆ ಬಲದ ಕೈ ಮತ್ತು ಎದೆಗೆ ಗಾಯ ಆಗಿರುತ್ತದೆ. ನನ್ನ ತಾಯಿಗೂ ಸಹ ಎದೆಗೆ ಮತ್ತು ಕೈಗೆ ಗಾಯ ಆಗಿರುತ್ತದೆ. ಅದೇ ಆಟೋದಲ್ಲಿ ನನ್ನ ಮಗ ಮತ್ತು ತಾಯಿಯವರನ್ನು ಕರೆದುಕೊಂಡು ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ನನ್ನ ತಾಯಿಯನ್ನು ಚಿಕಿತ್ಸೆ ಕೊಟ್ಟಿರುತ್ತಾರೆ. ನನ್ನ ಮಗನಾದ ಭುವನ್ ನನ್ನು ಪರೀಕ್ಷೆ ಮಾಡಿದ ವೈದ್ಯರು ಆತ ಸ್ಥಳದಲ್ಲೇ ಮೃತ ಪಟ್ಟಿದ್ದಾರೆ ಎಂದು ತಿಳಿಸಿರುತ್ತಾರೆ. ನಂತರ ನಾನು ಸೋಮವಾರಪೇಟೆ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಮತ್ತೊಂದು ದಾಖಲೆ ತೋರಿಸಲಾಗಿ ಅದು ಪಂಚನಾಮೆ ಆಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು

**ಸಿಸಿ ಃ 735/2021**

**ಚಾಸಾ –1**

**ಪ್ರಾಸಾ –1**

ಅದನ್ನು ನಿಪಿ 2 ಎಂದು ಮತ್ತು ಅದರಲ್ಲಿರುವ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು.

ಆರೋಪಿಯ ತಪ್ಪಿನಿಂದ ಸದರಿ ಅಪಘಾತ ಆಗಿರುತ್ತದೆ. ಸಾಕ್ಷಿ ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ

ಮುಖ್ಯ ವಿಚಾರಣೆ ಮುಕ್ತಾಯವಾಯಿತು.

ಪಾಟಿ ಸವಾಲುಃ ಶ್ರೀ. ಟಿ.ಜೆ.ಪಿ ವಕೀಲರಿಂದ

ಪಾಟಿ ಸವಾಲಿಗೆ ಸಮಯ ಕೋರಿದ್ದು ರೂ.500/- ಖರ್ಚು ವಿಧಿಸಿ ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).

ಸಹಿ/-

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ